ದಿನಾಂಕಃ 18-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲುಃ</u>**- 1 ನೇ ಎದುರುದಾರ ಪರ ಶ್ರೀ ಎಂ ಎಸ್ ಎಂ ವಕೀಲರಿಂದ

1 ನೇ ಎದುರುದಾರರು ಒಳ್ಳೇಯ ಅನುಭವಿ ಚಾಲಕ ಇದ್ದರು ಎಂದರೆ ಸರಿಯಲ್ಲ. 1 ನೇ ಎದುರುದಾರರ ನಿರ್ದೇಶದನ ಮೇರೆಗೆ ವಾಹನ ಸಂಖ್ಯೆ ಕೆಎ 27 ಟಿಸಿ 5260 ನೇದ್ದನ್ನು ಅದರ ಚಾಲಕ ಚಲಾಯಿಸುತ್ತಿದ್ದರು ಎಂದರೆ ಸರಿಯಲ್ಲ. 1 ನೇ ಎದುರುದಾರರು ಚಾಲಕ ಒಳ್ಳೇಯ ಅನುಭವಿ ಮತ್ತು ಪ್ರಾಮಾಣಿಕ ಇದ್ದಿದ್ದರಿಂದ ಅವರಿಗೆ ಒಳ್ಳೇಯ ಸಂಬಳ ನೀಡುತ್ತಿದ್ದರು ಎಂದರೆ ಸರಿಯಲ್ಲ. ಅಪಘಾತವಾದಾಗ ವಾಹನ ಚಾಲಕನಿಗೆ ಸೂಕ್ತವಾದ ವಾಹನ ಚಾಲನಾ ಪರವಾನಿಗೆ ಪತ್ರ ಇತ್ತು ಎಂದರೆ ಸರಿಯಲ್ಲ. 1 ನೇ ಎದುರುದಾರರ ವಾಹನ ಚಾಲಕನು ವಾಹನ ಚಾಲನಾ ಪರವಾನಿಗೆ ಪತ್ರ ಮತ್ತು ವಾಹನದ ಇನ್ನಿತರ ದಾಖಲೆಗಳನ್ನು ಹೊಂದಿದ್ದರು ಎಂದರೆ ಸರಿಯಲ್ಲ. ಆದ್ದರಿಂದ 1 ನೇ ಎದುರುದಾರರು ಅರ್ಜಿದಾರರಿಗೆ ಪರಿಹಾರ ನೀಡುವ ಹೊಣೆಗಾರಿಕೆ ಹೊಂದಿಲ್ಲ ಎಂದರೆ ಸರಿಯಲ್ಲ.

<u>ಪಾಟಿ ಸವಾಲುಃ</u>- ಅರ್ಜಿದಾರ ಪರ ಶ್ರೀ ಬಿ ಸಿ ಕೆ ವಕೀಲರಿಂದ

ಈ ಅರ್ಜಿಯ ಸಂಗತಿಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಗೊತ್ತಿರುತ್ತದೆ. ಅಪಘಾತವು 1 ನೇ ಎದುರುದಾರರಲ್ಲಿ ಮೃತ ನಿಂಗಪ್ಪ ಇವರು ಅವರ ಹೇಳಿಕೆ ಮೇರೆಗೆ ಕೆಲಸ ಮಾಡುವಾಗ ಆಗಿರುತ್ತದೆ ಎಂದರೆ ಸರಿಯಲ್ಲ. ಮೃತ ನಿಂಗಪ್ಪ ಇವರು ಅಪಘಾತದ ದಿನದಂದು ಸೂಕ್ತವಾದ ವಾಹನ ಚಾಲನೆ ಪರವಾನಿಗೆ ಪತ್ರ ಹೊಂದಿದ್ದರು ಎಂದರೆ ಸರಿಯಲ್ಲ. 1 ನೇ ಎದುರುದಾರರು ಮತ್ತು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ನಮ್ಮ ಕಂಪನಿಯವರು ಚಾಲಕನ ಚಾಲನಾ ಪರವಾನಿಗೆ ಪತ್ರ ಮತ್ತು ವಾಹನದ ದಾಖಲೆಗಳನ್ನು ಹಾಜರುಪಡಿಸುವಂತೆ ಕೋರಿ ನೋಟಿಸು ನೀಡಿರುವುದಾಗಿ ಹೇಳಿದ್ದು ಆಗ 1 ನೇ ಎದುರುದಾರ ಮತ್ತು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೋಟಿಸಗೆ ಏನು ಉತ್ತರ ನೀಡಿರುತ್ತಾರೆ ಎಂಬ ದಾಖಲೆ

ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿ ಹಾಗೆ ನಮ್ಮ ನೋಟಿಸಗೆ ಯಾವುದೇ ಪ್ರತ್ಯುತ್ತರ ನೀಡಿಲ್ಲ ಆದ್ದರಿಂದಲೇ ಹಾಜರುಪಡಿಸಿಲ್ಲ ಎಂದು ಮುಂದುವರೆದು ನುಡಿಯುತ್ತಾರೆ. ಹಾಗೆ ನೋಟಿಸಗೆ ನೀಡಿದ ಪ್ರತ್ಯುತ್ತರಗಳನ್ನು ಅರ್ಜಿಯಲ್ಲಿ ಹಾಜರುಪಡಿಸಿದರೇ ನಿಜಸಂಗತಿ ಗೊತ್ತಾಗುತ್ತದೆ ಎಂದು ಬೇಕು ಅಂತಲೇ ಅವುಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಅಪಘಾತಕ್ಕೆ ಒಳಪಟ್ಟ ವಾಹನಕ್ಕೆ ನಮ್ಮ ವಿಮಾ ಕಂಪನಿಯವರು ಪ್ಯಾಕೇಜ್ ಪಾಲಿಸಿ ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಟ್ರ್ಯಾಕ್ಟರಗೆ ವಿಮೆ ನೀಡಿದ್ದು ಟ್ರೇಲರಗೆ ನೀಡಿಲ್ಲ ಎಂದು ಮುಂದುವರೆದು ನುಡಿಯುತ್ತಾರೆ. ವಿಮಾ ಒಪ್ಪಂದವು ನಮ್ಮ ಮತ್ತು ಮಾಲಕರ ನಡುವೆ ಮಾತ್ರ ಇರುತ್ತದೆ ಎಂದರೆ ಸರಿ. ಆದ್ದರಿಂದ ಅರ್ಜಿದಾರರು ಮತ್ತು ಮೃತರು ನಮ್ಮ ವಿಮಾ ಒಪ್ಪಂದಕ್ಕೆ 3 ನೇ ಪಕ್ಷಗಾರರು ಆಗುತ್ತಾರೆ ಎಂದರೆ ಸಾಕ್ಷಿ ಮೃತರು ಮಾತ್ರ ಆಗುತ್ತಾರೆ ಎಂದು ನುಡಿಯುತ್ತಾರೆ. ಅಪಘಾತವು 1 ನೇ ಎದುರುದಾರರು ಮೃತ ನಿಂಗಪ್ಪ ಇವರಿಗೆ ನಿರ್ದೇಶನದ ಮೇರೆಗೆ ಕೆಲಸ ನಿರ್ವಹಿಸುವಂತೆ ಹೇಳಿದ್ದು ಆದ್ದರಿಂದ ನಮ್ಮ ವಿಮಾ ಕಂಪನಿಯವರ ಅರ್ಜಿದಾರರಿಗೆ ಪರಹಾರ ನೀಡಬೇಕಾಗುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸದರಿ ಸಾಕ್ಷಿದಾರರ ಸಾಕ್ಷ್ಯವನ್ನು ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ,
ಶಿಗ್ಗಾಂವ.
(ಸ್ಥಳಃ ಸವಣೂರ)

ಇಸಿಎ ನಂ.  4/2022
ಆರ್ ಡಬ್ಲ್ಯು 1